# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 47 |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 15.02.2022 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ, ಮೇಲುಕೋಟೆ ಕ್ಷೇತ್ರದಲ್ಲಿ ಬರುವ ಚಿನಕುರಳಿ ಮತ್ತು ಹೊನಗಾನಹಳ್ಳಿ ಗ್ರಾಮ ಪಂಚಾಯತ್ ಗಳ ವ್ಯಾಪ್ತಿಯಲ್ಲಿ ಕಲ್ಲುಗಣಿಗಾರಿಕೆ ನಡೆಸಿದ ಪ್ರಯುಕ್ತ ಸರ್ಕಾರಕ್ಕೆ 29 ಕೋಟಿಗೂ ಹೆಚ್ಚು ರಾಜಧನ ನಷ್ಟವಾಗಿರುವ ಕುರಿತು ಸರ್ಕಾರಕ್ಕೆ ಮಾಹಿತಿ ಇದೆಯೇ; | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಹೊನಗಾನಹಳ್ಳಿ ಗ್ರಾಮದ ಸರ್ವೆ ನಂ.127 ಹಾಗೂ ಚಿನಕುರಳಿ ಗ್ರಾಮದ ಸರ್ವೆ ನಂ.80 ರಲ್ಲಿ ಅನಧಿಕೃತವಾಗಿ ಕಲ್ಲುಗಣಿಗಾರಿಕೆ ನಡೆಸಲಾಗಿದೆ ಎಂದು ತಿಳಿಸಿ ಹಿರಿಯ ಭೂವಿಜ್ಞಾನಿ, ಮಂಡ್ಯ ರವರು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43(5) ರಂತೆ 2012-13ನೇ ಸಾಲಿನಲ್ಲಿ ಪ್ರತಿ ಟನ್ ಕಟ್ಟಡ ಕಲ್ಲಿಗೆ ಚಾಲ್ತಿಯಲ್ಲಿದ್ದ ರಾಜಧನ ಮೊತ್ತ ರೂ.30/- ರಂತೆ, ರಾಜಧನದ 05 ಪಟ್ಟು ದಂಡ ವಿಧಿಸಿ, ಪಾವತಿಸುವಂತೆ ಸಂಬಂಧಪಟ್ಟ ಗ್ರಾಮ ಪಂಚಾಯತ್ ಗಳಿಗೆ ನೋಟೀಸ್ ಜಾರಿ ಮಾಡಿರುತ್ತಾರೆ. |

(ಮೆ.ಟನ್ ಗಳಲ್ಲಿ) (ರೂ.ಗಳಲ್ಲಿ)

| ಕ್ರ. ಸಂ. | ಗ್ರಾಮ ಮತ್ತು ಸರ್ವೆ ನಂ. | ಅಂದಾಜಿಸಿರುವ ಕಟ್ಟಡ ಕಲ್ಲಿನ ಪ್ರಮಾಣ | ವಿಧಿಸಿದ ರಾಜಧನದ 05 ಪಟ್ಟು ದಂಡ |
|---|---|---|---|
| 1 | ಹೊನಗಾನ ಹಳ್ಳಿ 27 | 1504930 | 22,57,39,500/- |
| 2 | ಚಿನಕುರಳಿ 80 | 435270 | 6,52,90,500/- |
| **ಒಟ್ಟು** | | **1940200** | **29,10,30,000/-** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಸದರಿ ಮೊತ್ತದ ವಸೂಲಾತಿ ಕುರಿತು ಸರ್ಕಾರ ಯಾವ ಕ್ರಮಕೈಗೊಂಡಿದೆ; | ಹೊನಗಾನಹಳ್ಳಿ ಮತ್ತು ಚಿನಕುರಳಿ ಗ್ರಾಮ ಪಂಚಾಯತ್ ರವರು ಸದರಿ ಬಾಕಿಯನ್ನು ಪಾವತಿಸದ ಕಾರಣ M.M. (D&R) ಕಾಯ್ದೆ, 1957 ರ ಕಲಂ 25 ರಂತೆ ಭೂಕಂದಾಯ ಬಾಕಿ ಎಂದು ವಸೂಲು ಮಾಡಲು ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ರವರಿಗೆ ದಿನಾಂಕ 26.09.2015 ರಂದು ಹಿರಿಯ ಭೂವಿಜ್ಞಾನಿ, ಮಂಡ್ಯ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. |

. . . 2

| | | |
|---|---|---|
| ಇ) | ರಾಜ್ಯದ ಉಚ್ಚನ್ಯಾಯಾಲಯವು ಸರ್ಕಾರಕ್ಕೆ ಪೂರ್ಣ ರಾಜಧನ ಪಾವತಿಸುವಂತೆ 1997 ರಲ್ಲೇ ಆದೇಶ ನೀಡಿದ್ದರೂ ಈ ಕುರಿತು ಕ್ರಮ ಕೈಗೊಳ್ಳದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? | ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ದಿನಾಂಕ 10.08.2021 ರಂದು ಮಾನ್ಯ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ, ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಚಿನಕುರಳಿ ಮತ್ತು ಹೊನಗಾನಹಳ್ಳಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಲ್ಲು ಗಣಿಗಾರಿಕೆ ನಡೆಸಲು 1980 ರಿಂದ 2013ರವರೆಗೆ ಸಾರ್ವಜನಿಕರಿಗೆ ಗಣಿಗಾರಿಕೆಗೆ ನೀಡಲಾಗಿತ್ತು. ಗುತ್ತಿಗೆ ವ್ಯವಹರಣೆಯ ಹರಾಜಿನಿಂದ ಸಂಗ್ರಹವಾದ ಹಣವನ್ನು ಗ್ರಾಮಗಳ ಅಭಿವೃದ್ಧಿಗಾಗಿ ವಿನಿಯೋಗಿಸಿಕೊಳ್ಳಲಾಗುತ್ತಿತ್ತೆಂದು ತಿಳಿಸುತ್ತಾ, ನಂತರದ ದಿನಗಳಲ್ಲಿ ಬದಲಾದ ಕಾನೂನಿನ ಹಿನ್ನೆಲೆಯಲ್ಲಿ, ಕಲ್ಲು ಗಣಿಗಾರಿಕೆಯನ್ನು ರದ್ದುಪಡಿಸಿದ್ದಲ್ಲದೆ, ಒಟ್ಟಾರೆ ನಡೆಸಿದ ಗಣಿಗಾರಿಕೆಯ ಭೌತಿಕ ಅಂದಾಜನ್ನು ಗುರುತಿಸಿ ಅದಕ್ಕನುಗುಣವಾಗಿ ರಾಜಧನ ಹಾಗೂ ರಾಜಧನಕ್ಕೆ ದಂಡವನ್ನು ಸೇರ್ಪಡಿಸಿ ಪಂಚಾಯಿತಿಗಳಿಗೆ ಪಾವತಿಸುವಂತೆ ತಿಳಿಸಿರುವುದು ಅವೈಜ್ಞಾನಿಕವಾಗಿದೆಯೆಂದು ವಿವರಿಸಿ, ಈ ಸಮಸ್ಯೆಯನ್ನು ಸಮಿತಿಯಲ್ಲಿ ಪರಿಶೀಲಿಸಿ ಇತ್ಯರ್ಥಪಡಿಸುವಂತೆ ಮನವಿ ಸಲ್ಲಿಸಿರುತ್ತಾರೆ.<br><br>ಮಾನ್ಯ ಶಾಸಕರ ಕೋರಿಕೆ ಮೇರೆಗೆ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯಲ್ಲಿ ಸದರಿ ಗ್ರಾಮ ಪಂಚಾಯಿತಿಗಳಿಗೆ ವಿಧಿಸಿರುವ 05 ಪಟ್ಟು ರಾಜಧನದ ದಂಡದ ಮೊತ್ತವನ್ನು ಮನ್ನಾ ಮಾಡಲು ಸರ್ಕಾರದಿಂದ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಲಾಗಿದ್ದು, ಸದರಿ ವಿಷಯವು ಪ್ರಸ್ತುತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ ಸಿಐ -ಎಂಎಂಎನ್/30/2022

Halappa B

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.